**ಕರ್ನಾಟಕ ಸರ್ಕಾರ**

**ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಪದವಿ ಪೂರ್ವ ಶಿಕ್ಷಣ ಭವನ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.**

ಸಂಖ್ಯೆ:ಪಿಯುಇ/ಮೂಸೌಶಾ/ಉ.ಮೊ.ಜಮೆ/2021-22 ದಿ:೩೦-04-2021

## ಸುತ್ತೋಲೆ

**ವಿಷಯ:-** ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯದ ವಿವಿಧ ಯೋಜನೆಗಳಡಿ ಮಂಜೂರಾಗಿ ಅನುಷ್ಠಾನ ಸಂಸ್ಥೆಗಳಿಂದ ಕಾರ್ಯನುಷ್ಠಾನವಾಗಿರುವ ಕಾಮಗಾರಿಗಳಲ್ಲಿ ಉಳಿಕೆಯಾದ ಮೊತ್ತವನ್ನು ಸರ್ಕಾರಕ್ಕೆ ನಿಯಮಾನುಸಾರ ಜಮೆ ಮಾಡುವ ಕುರಿತು

1. ಪದವಿ ಪೂರ್ವ ಶಿಕ್ಷಣ ಇಲಾಖಾ ವ್ಯಾಪ್ತಿಯಲ್ಲಿ ಬರುವ ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಮೂಲಭೂತ ಸೌಲಭ್ಯಗಳಾದ ಕಟ್ಟಡ ನಿರ್ಮಾಣ, ಹೆಚ್ಚುವರಿ ತರಗತಿ ಕೊಠಡಿ, ಪ್ರಯೋಗಾಲಯ ಕೊಠಡಿ, ಕುಡಿಯುವ ನೀರು ಮತ್ತು ಶೌಚಾಲಯ, ಕಟ್ಟಡ ದುರಸ್ಥಿ/ನವೀಕರಣ/ಅಭಿವೃದ್ಧಿ ಇತ್ಯಾದಿ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.
2. ಸದರಿ ಮೂಲಭೂತ ಸೌಲಭ್ಯಗಳನ್ನು ನಬಾರ್ಡ್ ಸಹಯೋಗದ ಆರ್‌ಐಡಿಎಫ್ ಯೋಜನೆ, ಮೀಸಲು ಕ್ಷೇತ್ರ ಯೋಜನೆ (ಎಸ್‌ಸಿಎಸ್‌ಪಿ/ಟಿಎಸ್‌ಪಿ), ರಾಜ್ಯ ಬಂಡವಾಳ ವೆಚ್ಚ ಯೋಜನೆ, ವಿಶೇಷ ಅಭಿವೃದ್ಧಿ ಯೋಜನೆಗಳಡಿ (ಎಸ್‌ಡಿಪಿ) ಕಾಮಗಾರಿಗಳು ಅನುಷ್ಠಾನಗೊಳಿಸಲಾಗುತ್ತಿದ್ದು, ಪ್ರಸ್ತುತ ಸದರಿ ಯೋಜನೆಗಳ ಯೋಜನಾವಾರು ಲೆಕ್ಕ ಶೀರ್ಷಿಕೆಗಳ ವಿವರ ಈ ಕೆಳಕಂಡಂತಿದೆ.

| ಕ್ರ.ಸಂ | ಕಾಮಗಾರಿ ವಿವರ | ಲೆಕ್ಕ ಶೀರ್ಷಿಕೆ | ಯೋಜನೆ |
|---|---|---|---|
| 1 | ಕಟ್ಟಡ ನಿರ್ಮಾಣ/ಹೆಚ್ಚುವರಿ ಕೊಠಡಿ, ಪ್ರಯೋಗಾಲಯ, ಶೌಚಾಲಯ ನಿರ್ಮಾಣ | 4202-01-202-1-05-436 (ನಬಾರ್ಡ್ ಕಾಮಗಾರಿಗಳು) | ಆರ್‌ಐಡಿಎಫ್ |
| 2 | ಕಟ್ಟಡ ನಿರ್ಮಾಣ/ಹೆಚ್ಚುವರಿ ಕೊಠಡಿ, ಪ್ರಯೋಗಾಲಯ, ಶೌಚಾಲಯ ನಿರ್ಮಾಣ | 4202-01-202-1-05-386 (ನಿರ್ಮಾಣ) | ರಾಜ್ಯ ಬಂಡವಾಳ ವೆಚ್ಚ |
| 3 | ಕಟ್ಟಡ ನಿರ್ಮಾಣ/ಹೆಚ್ಚುವರಿ ಕೊಠಡಿ, ಪ್ರಯೋಗಾಲಯ, ಶೌಚಾಲಯ ನಿರ್ಮಾಣ | 4202-01-600-0-04-422/423 | ಮೀಸಲು ಕ್ಷೇತ್ರ (ಎಸ್‌ಸಿಎಸ್‌ಪಿ/ಟಿಎಸ್‌ಪಿ) |
| 4 | ಕಟ್ಟಡ ನಿರ್ಮಾಣ/ಹೆಚ್ಚುವರಿ ಕೊಠಡಿ, ಪ್ರಯೋಗಾಲಯ, ಶೌಚಾಲಯ ನಿರ್ಮಾಣ | 2202-02-108-0-01-133 ಮತ್ತು 4202-01-202-1-05-133 | ವಿಶೇಷ ಅಭಿವೃದ್ಧಿ ಯೋಜನೆ |
| 5 | ಕಟ್ಟಡ ನವೀಕರಣ / ಅಭಿವೃದ್ಧಿ / ದುರಸ್ಥಿ | 2202-01-053-0-02-059 | ಸಾಮಾನ್ಯ |
| | | 2202-01-053-0-02-422/423 | (ಎಸ್‌ಸಿಎಸ್‌ಪಿ/ಟಿಎಸ್‌ಪಿ) |

3. ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಅಗತ್ಯ ಮೂಲಭೂತ ಸೌಲಭ್ಯ ಒದಗಿಸಲು ವಿವಿಧ ಯೋಜನೆ ಹಾಗೂ ಲೆಕ್ಕ ಶೀರ್ಷಿಕೆಗಳಡಿ ಮಂಜೂರಾಗಿರುವ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಅನುಷ್ಠಾನಾಧಿಕಾರಿಗಳಿಗೆ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ. ಸದರಿ ಅನುಮೋದನೆಗೊಂಡಿರುವ ಕಾಮಗಾರಿಗಳನ್ನು ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಮತ್ತು ಪಂಚಾಯತ್ ರಾಜ್ ಇಂಜನಿಯರಿಂಗ್ ಇಲಾಖೆಗಳ ಮುಖಾಂತರ ಅನುಷ್ಠಾನಗೊಳಿಸಲಾಗುತ್ತಿದೆ. ಈ ರೀತ್ಯ ವಿವಿಧ ಯೋಜನೆಗಳಡಿ ಬಿಡುಗಡೆ ಮಾಡಲಾದ ಅನುದಾನವನ್ನು ಇಲಾಖೆಯಿಂದ ನೇರವಾಗಿ ಹಾಗೂ

ಕೆಲವೊಮ್ಮೆ ಜಿಲ್ಲಾ ಉಪ ನಿರ್ದೇಶಕರುಗಳ ಮುಖಾಂತರ ಸಂಬಂಧಪಟ್ಟ ಇಲಾಖೆಗಳ ಮುಖ್ಯ ಅಭಿಯಂತರರು/ ಕಾರ್ಯಪಾಲಕ ಅಭಿಯಂತರರು ಇವರಗಳ ಠೇವಣಿ ವಂತಿಕೆ 8443- ಖಾತೆಗೆ ಜಮೆ ಮಾಡಲಾಗಿದೆ/ಮಾಡಲಾಗುತ್ತಿದೆ.

4. ಕಾಮಗಾರಿ ಪೂರ್ಣಗೊಂಡು ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರಿಗೆ/ಉಪಯೋಗಿ ಇಲಾಖೆಗೆ ಹಸ್ತಾಂತರಿಸಿದ ನಂತರ , ಅನುಮೋದಿತ ಅನುದಾನದಲ್ಲಿ ಉಳಿಕೆಯಾದಲ್ಲಿ ಸದರಿ ಉಳಿಕೆ ಮೊತ್ತವನ್ನು ಸರ್ಕಾರದ ಖಾತೆಗೆ ಅನುಷ್ಠಾನಾಧಿಕಾರಿಗಳು ನಿಯಮಾನುಸಾರ ತಮ್ಮ ಹಂತದಲ್ಲಿಯೇ ಜಮೆ ಮಾಡಬೇಕಾಗಿರುತ್ತದೆ.
5. ಈ ಹಿನ್ನಲೆಯಲ್ಲಿ, ಸದರಿ ವಿವಿಧ ಯೋಜನೆ ಹಾಗೂ ಲೆಕ್ಕ ಶೀರ್ಷಿಕೆಗಳಡಿ ಅನುಷ್ಠಾನಗೊಂಡು ಹಸ್ತಾಂತರವಾಗಿರುವ ಕಾಮಗಾರಿಗಳಲ್ಲಿ ಉಳಿಕೆಯಾಗಿರುವ ಮೊತ್ತ ಹಾಗೂ ಉಳಿಕೆಯಾದ ಮೊತ್ತದಿಂದ ಬಡ್ಡಿ ಲಭ್ಯವಾಗಿದ್ದಲ್ಲಿ, ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳು ತಮ್ಮ ಇಲಾಖಾ/ವಿಭಾಗದ ಹಂತದಲ್ಲಿಯೇ ನಿಯಮಾನುಸಾರ ಖಜಾನೆ-2 ತಂತ್ರಾಂಶದಡಿ ಸರ್ಕಾರಕ್ಕೆ ಜಮೆ ಮಾಡುವ ಸಂಬಂಧ ಸೂಕ್ತ ಕ್ರಮವಹಿಸಲು ತಿಳಿಸಿದೆ.
6. ಠೇವಣಿ-ವಂತಿಕೆ ಖಾತೆ 8443- ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಕಾಮಗಾರಿಗಳ ಅನುಷ್ಠಾನಕ್ಕಾಗಿ ಬಿಡುಗಡೆ ಮಾಡಲಾದ ಅನುದಾನದಲ್ಲಿ ಹಾಗೂ ಕೆಲವೊಮ್ಮೆ ಅನುಷ್ಠಾನಾಧಿಕಾರಿಗಳು ಪಿ.ಡಿ. ಖಾತೆಗೆ ಜಮೆ ಮಾಡಿಕೊಂಡಿದ್ದಲ್ಲಿ, ಕಾಮಗಾರಿ ಪೂರ್ಣಗೊಂಡು ಹಸ್ತಾಂತರವಾಗಿ ಉಳಿಕೆಯಾದ ಅನುದಾನವನ್ನು ಮುಂದಿನ 03 ಆರ್ಥಿಕ ವರ್ಷದೊಳಗೆ ನಿಯಮಾನುಸಾರ ಸರ್ಕಾರಕ್ಕೆ ಜಮೆ ಮಾಡದಿದ್ದ ಪಕ್ಷದಲ್ಲಿ ಸದರಿ ಮೊತ್ತವು Freeze ಆಗಿರುತ್ತದೆ. ಇಂತಹ ಉಳಿಕೆಯಾದ ಅನುದಾನ Freeze ಆಗಿದ್ದರೆ ಸದರಿ ಮೊತ್ತವನ್ನು ಸಹ ತಮ್ಮ ಹಂತದಲ್ಲಿಯೇ ನಿಯಮಾನುಸಾರ ಸರ್ಕಾರದ ಖಾತೆಗೆ ಜಮಾ ಮಾಡಲು ತಿಳಿಸಿದೆ.
7. ಈ ರೀತ್ಯ ಕಾಮಗಾರಿವಾರು ಖಜಾನೆ-2ರಡಿ ಜಮೆ ಮಾಡಲಾದ ಮೊತ್ತಕ್ಕೆ ಚಲನ್ ಪ್ರತಿ, ಟಿಆರ್ ರಸೀದಿ ಹಾಗೂ ಇತ್ಯಾದಿ ದಾಖಲೆಗಳ ಪ್ರತಿಯನ್ನು ಜಂಟಿ ನಿರ್ದೇಶಕರು, ಮೂಲಭೂತ ಸೌಲಭ್ಯ , ಪದವಿ ಪೂರ್ವ ಶಿಕ್ಷಣ ಇಲಾಖೆ, 18 ನೇ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-12 ಇಲ್ಲಿಗೆ ತಪ್ಪದೇ ಸಲ್ಲಿಸುವಂತೆ ಈ ಮೂಲಕ ತಿಳಿಸಿದೆ.

Snehal

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ

**ಇವರಿಗೆ,**

1. ಮುಖ್ಯ ಅಭಿಯಂತರರು- ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ(ಉತ್ತರ, ದಕ್ಷಿಣ, ಈಶಾನ್ಯ ಹಾಗೂ ಕೇಂದ್ರ ವಲಯ)
2. ಮುಖ್ಯ ಅಭಿಯಂತರರು- ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
3. ಎಲ್ಲಾ ಕಾರ್ಯಪಾಲಕ ಅಭಿಯಂತರರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ (ಮುಖ್ಯ ಅಭಿಯಂತರರ ಮೂಲಕ)
4. ಎಲ್ಲಾ ಕಾರ್ಯಪಾಲಕ ಅಭಿಯಂತರರರು, - ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ (ಮುಖ್ಯ ಅಭಿಯಂತರರ ಮೂಲಕ)
5. ಎಲ್ಲಾ ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ - ಸುತ್ತೋಲೆಯಂತೆ ಕಟ್ಟುನಿಟ್ಟಾಗಿ ಕ್ರಮವಹಿಸಲು ಸೂಚಿಸಿದೆ.
6. ಖಜಾನಾಧಿಕಾರಿಗಳು, ರಾಜ್ಯ ಹುಜೂರು ಖಜಾನೆ, ಬೆಂಗಳೂರು
7. ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು, ಜಿಲ್ಲಾ ಖಜಾನೆ
8. ಉಪನಿರ್ದೇಶಕರು, ಟಿಎನ್ಎಂಸಿ ಖನಿಜ ಭವನ, ಬೆಂಗಳೂರು.
9. ಲೆಕ್ಕಧಿಕಾರಿಗಳು, ಲೆಕ್ಕಪತ್ರಶಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ,ಬೆಂಗಳೂರು
10. ಇ-ಆಡಳಿತ ಶಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ-ಅಂತರ್ಜಾಲದಲ್ಲಿ ಪ್ರಕಟಿಸಲು
11. ಹೆಚ್ಚುವರಿ/ಕಛೇರಿ ಪ್ರತಿ